# ವಿದ್ಯಾಕಾಶಿ ಕರಿಯರ್ ಅಕಾಡೆಮಿ

**ಸಮಯ : 90 ನಿಮಿಷಗಳು**

ನೊಂದಣಿ ಸಂಖ್ಯೆ :

## ಪಿಎಸ್‌ಐ ಪತ್ರಿಕೆ – 1

**ಪ್ರಬಂಧ, ಭಾಷಾಂತರ & ಸಾರಾಂಶ ಬರವಣಿಗೆ,**

**ಪ್ರಶ್ನೆಗಳು**

**ಅಂಕಗಳು : 100**

ಹೆಸರು :

ಮೊಬೈಲ್ ನಂ :

**28-03-2021**

## ಭಾಗ – I

**ಈ ಕೆಳಕಂಡ ಯಾವುದಾದರೂ ಒಂದು ವಿಷಯಕ್ಕೆ ಸಂಬಂಧಿಸಿದಂತೆ 600 ಪದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ.**

1.“ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಭಾಷಾ ಹೆಮ್ಮೆಯ ರಾಜಕೀಯವನ್ನು ಅರ್ಥಮಾಡಿಕೊಳ್ಳುವ ಬಗ್ಗೆ” ವಿಮರ್ಶಾತ್ಮಕವಾಗಿ ಬರೆಯಿರಿ

ಅಥವಾ

2. “ಆತ್ಮನಿರ್ಭರ ಭಾರತ : ಸ್ವಾವಲಂಬಿ ಭಾರತ”

ಅಥವಾ

3. “ಭಾರತದಲ್ಲಿನ ಪ್ರಸ್ತುತ ಆರ್ಥಿಕ ಹಿಂಜರಿತದ ಕಾರಣಗಳನ್ನು ಪಟ್ಟಿಮಾಡಿ ಮತ್ತು ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಕ್ರಮಗಳನ್ನು ಸೂಚಿಸಿ”

ಅಥವಾ

4. “ರಾಜ್ಯಪಾಲರ ವಿವೇಚನಾ ಅಧಿಕಾರವನ್ನು ಟೀಕಾತ್ಮಕವಾಗಿ” ವಿವರಿಸಿ

ಅಥವಾ

5. “ಕಲ್ಯಾಣ ಕರ್ನಾಟಕ ಅಭಿವೃಧಿ ಮತ್ತು ವಿಶೇಷ ಸ್ಥಾನಮಾನ”

# ಭಾಗ – II

**II.** ಈ ಕೆಳಕಂಡ ಸಾರಾಂಶವನ್ನು ಕನ್ನಡದಿಂದ ಇಂಗ್ಲೀಷಗೆ ಭಾಷಾಂತರಿಸಿ.

**Translate the following paragraph from Kannada to English.**

ಈಗಿನ ದಿನಗಳಲ್ಲಿ ವಿಶೇಷವಾಗಿ ಮಧ್ಯಮ ವರ್ಗದ ಜನರು ಸರ್ಕಾರಿ ನೌಕರಿಯ ಮೇಲೆ ಅವಲಂಬಿತರಾಗಿಲ್ಲ. ಆದರೆ ಎಲ್ಲರೂ ಮೀಸಲಾತಿ ಬಯಸುತ್ತಿರುವುದು ಶೈಕ್ಷಣಿಕ ಸೀಟುಗಳಿಗಾಗಿ. ಉತ್ತಮ ಸರ್ಕಾರಿ ಸಂಸ್ಥೆಗಳಲ್ಲಿ ತುಂಬಾ ಸ್ಪರ್ಧೆ ಇದೆ. ಈಗಿರುವ ಶೇ 50ರ ಪರಿಮಿತಿಯನ್ನು ಮೀರಿ ಮೀಸಲಾತಿಯನ್ನು ನೀಡಬೇಕೆಂದು ರಾಜ್ಯ ಸರ್ಕಾರವು ಸುಪ್ರಿಂ ಕೋರ್ಟ್‌ಗೆ ಮನವಿ ಮಾಡಿದೆ. ಅಂದರೆ ಸಾಮಾನ್ಯ ವರ್ಗದ ಸೀಟುಗಳು ಇನ್ನೂ ಕಡಿಮೆಯಾಗುತ್ತಿವೆ.

ಸಾಮಾನ್ಯ ವರ್ಗ ಎಂದರೆ ಅದು ಬರೀ ಪ್ರಬಲ ಜಾತಿಯವರಿಗೆ ಸಂಬಂಧಿಸಿದ್ದು ಎನ್ನುವ ಭ್ರಮೆ ಬಹು ಜನರಿಗೆ ಇದೆ. ಯಾವುದೇ ಮೀಸಲಾತಿ ವರ್ಗ ಇದ್ದರೂ ಸಾಮಾನ್ಯ ವರ್ಗದಲ್ಲಿ ಸೀಟು ಲಭ್ಯವಿದ್ದರೆ ಅದಕ್ಕೆ ಆದ್ಯತೆ ನೀಡಲಾಗಿತ್ತದೆ. ಅಂದಾಗಲೇ ಮೀಸಲಾತಿಗೆ ಅರ್ಥ ಬರುವುದು. ಇದು ಬಹು ಜನರಿಗೆ ತಿಳಿದಿಲ್ಲವೆಂದೆನಿಸುತ್ತದೆ. ಆರ್ಥಿಕವಾಗಿ ಹಿಂದುಳಿದವರಿಗಾಗಿ ಈಗಾಗಲೇ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಅಂದರೆ ಇಲ್ಲಿಯವರೆಗೆ ಯಾವ ಜಾತಿಗಳಿಗೆ ಮೀಸಲಾತಿ ಇರಲಿಲ್ಲವೋ ಅವರಿಗಾಗಿ ಇನ್ನೊಂದು ವರ್ಗ ಮಾಡಿ ಮೀಸಲಾತಿ ನೀಡಿದಂತಾಯಿತು. ನಮ್ಮದು 3ಬಿ ವರ್ಗದವರಾದರೂ ಹೆಚ್ಚಿನ ಆದಾಯದ ಕಾರಣ ಸಾಮಾನ್ಯ ವರ್ಗದಲ್ಲಿ ಬರುತ್ತೇವೆ. ಇದೇ ರೀತಿ ಎಲ್ಲ ವರ್ಗದವರು ಕೆನೆಪದರ ನಿಯಮದ ಪ್ರಕಾರ ಸಾಮಾನ್ಯ ವರ್ಗದಲ್ಲಿ ಸ್ಪರ್ಧಿಸಬೇಕು, ಸಾಮಾನ್ಯ ವರ್ಗದ ಸೀಟುಗಳು ಎಲ್ಲರಿಗೂ ಸಂಬಂಧಿಸಿದ ಕಾರಣ ಇವು ಹೆಚ್ಚಿನ ಸಂಖ್ಯೆಯಲ್ಲಿ ಲಭ್ಯವಿರಬೇಕು.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – III

**III. ಈ ಕೆಳಕಂಡ ಸಾರಾಂಶವನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ.**

**Translate the following paragraph from English to Kannada.**

While we are still in the grip of the COVID-19 pandemic, Which is airborne, We have for-gotten that another such blight could well come from contaminated water , NITI Ayog and Water Aid, amongst others, have found that over 70% of India's surface and ground-water is contaminated by human and other waste and is likely to carry viruses. Indiscriminate human activity is often the reason for environmental degradation and pandemic.

The practice of keeping animals locked together for mass production of meat produces an artificial environment that can birth mutations in erstwhile dormant viruses. Earlier, in the wild , animals were far away from human habitats. The viruses they harbored remained isolated. But today's practices can spawn viruses that can easily transfer to the human population.

ವಿದ್ಯಾಕಾಶಿ ಕರಿಯರ್ ಅಕಾಡೆಮಿ

# ಭಾಗ – IV

**II.** ಈ ಕೆಳಕಂಡ ವಿಷಯವನ್ನು ಸಂಕ್ಷೇಪಿಸಿ. 1/3 ಕ್ಕಿಂತ ಮೀರದಂತೆ ಬರೆಯಿರಿ.

'ಘಟ್ಟ ಉಳಿದರೆ ಘಟ ಉಳಿದೀತು!' ಅಖಿಲೇಶ್ ಚಿಪ್ಪಳಿ ಅವರ ವಿಶ್ಲೇಷಣೆಯು ಪರಿಸರದ ನೆಲೆಯಲ್ಲಿ ಎಲ್ಲರ ಕಣ್ಣು ತೆರೆಸುವಂತಿದೆ. ಅಭಿವೃದ್ಧಿಯ ಹೆಸರಿನಲ್ಲಿ ವಿನಾಶದತ್ತ ಸಾಗುತ್ತಿರುವ ಪರಿಸರ, ಜೀವವೈವಿಧ್ಯ, ಸಸ್ಯಸಂಕುಲದ ಕುರಿತು ಪ್ರಕಟಗೊಂಡ ಇಂತಹ ನೂರಾರು ಲೇಖನಗಳು, ವ್ಯಕ್ತವಾದ ಸಾವಿರಾರು ಅಭಿಪ್ರಾಯಗಳನ್ನು ಆಡಳಿತರೂಢರು, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳನ್ನು ಎಚ್ಚರಿಸದಿರುವುದು ಅಚ್ಚರಿಯನ್ನು ಉಂಟುಮಾಡುತ್ತದೆ. ಪರಿಸರ ಉಳಿಯಲಿ ಬಿಡಲಿ ಅವೈಜ್ಞಾನಿಕವಾದರೂ ಬೃಹತ್ ಯೋಜನೆಗಳನ್ನು ಹುಟ್ಟುಹಾಕುವಲ್ಲಿ ತಮಗೆ ದಕ್ಕಬಹುದಾದ ಲಾಭ, ಎಲ್ಲ ಮಾಫಿಯಾ ಬಳಗಕ್ಕೆ ಮಣೆಹಾಕಿ ಭರಪೂರ ಉಣಬಡಿಸುವ ಹುನ್ನಾರವೇ ಮುಖ್ಯವಾದಾಗ ಅಂತಹ ಮನಃಸ್ಥಿತಿಯನ್ನು ಬದಲಾಯಿಸುವುದೆಂತು?

ಪಶ್ಚಿಮಘಟ್ಟಗಳ ಮೇಲೆ ನಡೆಯುತ್ತಿರುವ ನಿರಂತರ ದಬ್ಬಾಳಿಕೆಗೆ ಕೊನೆಯೆಂಬುದೇ ಇಲ್ಲವಾಗಿದೆ. ಪರಿಣಾಮ ಶೂನ್ಯವಾಗಿರುವ, ಸಾವಿರಾರು ಕೋಟಿ ಹಣವನ್ನು ಈಗಾಗಲೇ ನುಂಗಿ ನೀರು ಕುಡಿದಿರುವ ಎತ್ತಿನಹೊಳೆ ಯೋಜನೆ, ಕುಡಿಯುವ ನೀರಿನ ನೆಪದಲ್ಲಿ ಈಗ ಪ್ರಸ್ತಾಪವಾಗಿರುವ ಬೇಡ್ತಿ ವರದಾ ನದಿ ಜೋಡಣೆ, ಸರಕು ಸಾಗಣೆಗೆ ಘಟ್ಟವನ್ನು ಕೊರೆದು ನಿರ್ಮಿಸಲು ಯೋಜಿಸಿದ ಚತುಷ್ಪಥ ಮಾರ್ಗ, ರಸ್ತೆ ಅಗಲೀಕರಣ, ಭೂಹಂಚಿಕೆಯ ನೆಪವೂಡ್ಡಿ ಕಡಿತಲೆಗೆ ತೆಲೆಯೊಡ್ಡುವ ಲಕ್ಷಗಟ್ಟಲೆ ಹೆಕ್ಟೇರ್ ಅರಣ್ಯ ... ಒಂದೆರಡಲ್ಲ. ಪಶ್ಚಿಮಘಟ್ಟವನ್ನು ಬಗೆದು ಹಸಿರು ಅಳಿಸಲು ಸಾಧ್ಯವಾಗುವಂತಹ ಎಲ್ಲ ಯೋಜನೆಗಳು ಆತುರದ ತುದಿಗಾಲಲ್ಲಿ ನಿಂತಿವೆ. ಪರಿಸರ ತಜ್ಞರ, ಪರಿಸರ ಪ್ರೇಮಿಗಳ, ಭೂವಿಜ್ಞಾನಿಗಳ, ಸ್ಥಳೀಯರ ಅನುಭವದ ವಿಚಾರಗಳಿಗೆ, ವರದಿಗಳಿಗೆ ಚಿಕ್ಕಾಸಿನ ಬೆಲೆಯೂ ಇಲ್ಲದಂತಾಗಿದೆ. ಯೋಜನೆಗಳು ವಿಫಲವಾದಾಗ ಉತ್ತರದಾಯಿತ್ವದ ಪ್ರಶ್ನೆಯೂ ಏಳುವುದಿಲ್ಲ. ಪರಿಸರದಿಂದಾಗಿ ನಾವು ಎನ್ನುವ ಪ್ರಜ್ಞೆ ಇಂತಹವರ ತಲೆಗೆ ಹೊಕ್ಕುವುದು ಯಾವಾಗಾ? ಇವೆಲ್ಲದರ ವಿರುದ್ಧ ದೊಡ್ಡಮಟ್ಟದ ಸಾರ್ವತ್ರಿಕ ಜನಾಂದೋಲನ ಹಿಂದೆಂದಿಗಿಂತಲೂ ಇಂದು ಹೆಚ್ಚು ಅಗತ್ಯವಾಗಿದೆ.